# ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ

## ಕೆ.ಆರ್.ನಗರ

**ಸಿ ಮಿಸ್ . 221/2017**

***ಡಿ ಡಬ್ಲೂ-3***

| | | |
|---|---|---|
| ಸಾಕ್ಷಿದಾರರ ಹೆಸರು | - | ಬಲರಾಮಯ್ಯ |
| ತಂದೆಯ ಹೆಸರು | - | ಲೇಟ್ ನಾರಾಯಣಯ್ಯ |
| ವಯಸ್ಸು | - | 65 ವರ್ಷ |
| ಕೆಲಸ | - | ವ್ಯವಸಾಯ |
| ವಾಸ | - | ಮಧುವನಹಳ್ಳಿ ಗ್ರಾಮ |

**ಸಾಕ್ಷಿಯನ್ನು ದಿನಾಂಕ 03-02-2024 ರಂದು ಮರಳಿ ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಶ್ರೀ ಎಚ್ ಕೆ ಸಿ ಅರ್ಜಿದಾರರ ಪರ ವಕೀಲರು**

ಈ ಪ್ರಕರಣದ ಅರ್ಜಿದಾರಳಾದ ನೀಲಾ ಮತ್ತು ಎದುರುದಾರರ ಪರಿಚಯ ಇದೆ. ನೀಲಾ ರವರು ನಮ್ಮ ಗ್ರಾಮದವರಾಗಿದ್ದು, ಅವರನ್ನು ಮಾರಗೌಡನ ಹಳ್ಳಿಯ ಅರುಣಕುಮಾರ ರವರೊಂದಿಗೆ ಮದುವೆ ಮಾಡಿ ಕೊಟ್ಟಿರುತ್ತಾರೆ. 1 ನೇ ಅರ್ಜಿದಾರಳಾದ ನೀಲಾ ಮತ್ತು ಎದುರುದಾರರ ವಿವಾಹವು 10 ವರ್ಷದ ಹಿಂದೆ ಕೆ ಆರ್ ನಗರದ ಆರ್ ಕೆ ಎಪ್ ಕಲ್ಯಾಣ ಮಂಟಪದಲ್ಲಿ ನೇರವೇರಿರುತ್ತದೆ.

2. ಮದುವೆಗೆ 2 ತಿಂಗಳು ಮೊದಲು ಎದುರುದಾರರು ಅರ್ಜಿದಾರರ ಮನೆಯ ಕಡೆಯಿಂದ ಮಾತುಕತೆಯ ಸಂದರ್ಭದಲ್ಲಿ ವರದಕ್ಷಿಣೆಯಾಗಿ 50 ಗ್ರಾಂ ಚಿನ್ನ, ಬೈಕ್ ಮತ್ತು 1 ಲಕ್ಷ ನಗದು ಮತ್ತು ಕಲ್ಯಾಣ ಮಂಟಪದಲ್ಲಿ ಮದುವೆಯನ್ನು ಮಾಡಿಕೊಡಬೇಕೆಂದು ಬೇಡಿಕೆಯನ್ನು ಇಟ್ಟಿದ್ದು ಸದರಿ ಸಂದರ್ಭದಲ್ಲಿ ನಾನು ಸಹ ಹಾಜರಿದ್ದು ಎದುರುದಾರರ ಬೇಡಿಕೆಯನ್ನು ಕೊಡಲು ಅರ್ಜಿದಾರರ ಮನೆಯವರು ಸಹ ಒಪ್ಪಿಕೊಂಡಿರುತ್ತಾರೆ.

ಅದರಂತೆ ಅರ್ಜಿದಾರರ ಮನೆಯವರು 1 ನೇ ಎದುರುದಾರರಿಗೆ ವರದಕ್ಷಿಣೆಯನ್ನು ನೀಡಿರುತ್ತಾರೆ ಅದನ್ನು ನಾನು ನೋಡಿರುವುದಿಲ್ಲ.

3. ಮದುವೆಯ ನಂತರ ಎದುರುದಾರರು ಅರ್ಜಿದಾರಳನ್ನು ಮಾರಗೌಡನ ಹಳ್ಳಿಯಲ್ಲಿರುವ ತಮ್ಮ ಮನೆಗೆ ಕರೆದುಕೊಂಡು ಹೋಗಿರುತ್ತಾರೆ. ನಂತರ 5-6 ದಿನಗಳ ನಂತರ ಅರ್ಜಿದಾರರ ತಂದೆ ತಾಯಿ ಮಾರಗೌಡನಹಳ್ಳಿ ಹೋಗಿ ಮಗಳು ಮತ್ತು ಅಳಿಯನನ್ನು ಮನೆಗೆ ಕರೆದುಕೊಂಡು ಬಂದಿರುತ್ತಾರೆ. ನಂತರ ಅರ್ಜಿದಾರರು ಎದುರುದಾರರ ಮನೆಗೆ ಹೋಗಿ ತಮ್ಮ ಸಂಸಾರಿಕ ಜೀವನವನ್ನು ಪ್ರಾರಂಭಿಸಿರುತ್ತಾರೆ.

4. 15 ದಿನಗಳವರೆಗೆ ಅರ್ಜಿದಾರಳು ಎದುರುದಾರರ ಮನೆಯಲ್ಲಿ ಇದ್ದು ನಂತರ ಅರ್ಜಿದಾರಳ ಗಂಡ 1 ನೇ ಎದುರುದಾರರು ಅರ್ಜಿದಾರರ ತವರು ಮನೆಗೆ ಕರೆದುಕೊಂಡು ಬಂದು ಬಿಟ್ಟು ಹೋಗಿರುತ್ತಾರೆ. ನಂತರ ಎದುರುದಾರರ ಅರ್ಜಿದಾರಳ ತಂದೆ ತಾಯಿ ಮನೆಗೆ ಬಂದಿರುವುದಿಲ್ಲ. ಯಾವ ಕಾರಣಕ್ಕಾಗಿ ಎದುರುದಾರರು ಅರ್ಜಿದಾರಳನ್ನು ಕರೆದುಕೊಂಡು ಬಂದು ಬಿಟ್ಟು ಹೋಗಿರುತ್ತಾರೆ ಎಂದು ನನಗೆ ನಿರ್ದಿಷ್ಟವಾಗಿ ಗೊತ್ತಿರುವುದಿಲ್ಲ. ಆದರೆ ನಾನು ಹಾಗೂ 7-8 ಜನ ಪಂಚಾಯಿತಿಗೆ ಹೋಗಿದ್ದು, ಅಲ್ಲಿ ಎದುರುದಾರರು ಗಲಾಟೆ ಮಾಡಿ ಏನು ಮಾಡಿಕೊಳ್ಳುತ್ತಿರಾ ಮಾಡಿಕೊಳ್ಳಿ ಎಂದು ತಿಳಿಸಿದ್ದು ಸಾಲೀಗ್ರಾಮ ಪೊಲೀಸ್ ಠಾಣೆಗೆ ದೂರು ಕೊಟ್ಟಿರುತ್ತಾರೆ.

ಈ ಹಂತದಲ್ಲಿ ಎದುರುದಾರರು ಪರ ವಕೀಲರು ಗೈರು ಹಾಜರಿದ್ದ ಕಾರಣ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಚಂದನ ಎಸ್ )

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ

# <u>ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ</u>

# <u>ಕೆ.ಆರ್.ನಗರ</u>

<u>ಸಿ ಮಿಸ್ . 221/2017</u>

***<u>ಡಿ ಡಬ್ಲೂ-2</u>***

| | | |
|---|---|---|
| ಸಾಕ್ಷಿದಾರರ ಹೆಸರು | - | ಕೆಂಪಯ್ಯ |
| ತಂದೆಯ ಹೆಸರು | - | ಲೇಟ್ ಚೆಲುವಯ್ಯ |
| ವಯಸ್ಸು | - | 65 ವರ್ಷ |
| ಕೆಲಸ | - | ವ್ಯವಸಾಯ |
| ವಾಸ | - | ಮಧುವನಹಳ್ಳಿ ಗ್ರಾಮ |

**<u>ಸಾಕ್ಷಿಯನ್ನು ದಿನಾಂಕ 03-02-2024 ರಂದು ಮರಳಿ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆ ಶ್ರೀ ಎಚ್ ಕೆ ಸಿ ಅರ್ಜಿದಾರರ ಪರ ವಕೀಲರು</u>**

ಈ ಪ್ರಕರಣದ ಅರ್ಜಿದಾರಳಾದ ನೀಲಾ ಮತ್ತು ಎದುರುದಾರರ ಪರಿಚಯ ಇದೆ. ನೀಲಾ ರವರು ನಮ್ಮ ಗ್ರಾಮದವರಾಗಿದ್ದು, ಅವರನ್ನು ಮಾರಗೌಡನ ಹಳ್ಳಿಯ ಅರುಣಕುಮಾರ ರವರೊಂದಿಗೆ ಮದುವೆ ಮಾಡಿ ಕೊಟ್ಟಿರುತ್ತಾರೆ. 1 ನೇ ಅರ್ಜಿದಾರಳಾದ ನೀಲಾ ಮತ್ತು ಎದುರುದಾರರ ವಿವಾಹವು ದಿಃ 20-03-2014 ರಂದು ಕೆ ಆರ್ ನಗರದ ಆರ್ ಕೆ ಎಪ್ ಕಲ್ಯಾಣ ಮಂಟಪದಲ್ಲಿ ನೇರವೇರಿರುತ್ತದೆ.

2. ಮದುವೆಗೆ 2 ತಿಂಗಳು ಮೊದಲು ಎದುರುದಾರರು ಅರ್ಜಿದಾರರ ಮನೆಯ ಕಡೆಯಿಂದ ಮಾತುಕತೆಯ ಸಂದರ್ಭದಲ್ಲಿ ವರದಕ್ಷಿಣೆಯಾಗಿ ಚಿನ್ನ, ಬೈಕ್ ಮತ್ತು ಕಲ್ಯಾಣ ಮಂಟಪದಲ್ಲಿ ಮದುವೆಯನ್ನುಮಾಡಿಕೊಡಬೇಕೆಂದು ಬೇಡಿಕೆಯನ್ನು ಇಟ್ಟಿದ್ದು ಸದರಿ ಸಂದರ್ಭದಲ್ಲಿ ನಾನು ಸಹ ಹಾಜರಿದ್ದು ಎದುರುದಾರರ ಬೇಡಿಕೆಯನ್ನು ಕೊಡಲು ಅರ್ಜಿದಾರರ ಮನೆಯವರು ಸಹ ಒಪ್ಪಿಕೊಂಡಿರುತ್ತಾರೆ. ಅದರಂತೆ ಅರ್ಜಿದಾರರ ಮನೆಯವರು 1 ನೇ ಎದುರುದಾರರಿಗೆ ವರದಕ್ಷಿಣೆಯಾಗಿ ಮದುವೆಯ ದಿನ

ಮಾತುಕತೆಯಂತೆ 50 ಗ್ರಾಂ ಚಿನ್ನ, 1 ಲಕ್ಷ ನಗದು, ಅದೇ ರೀತಿ ಒಂದು ಬೈಕ್ ನ್ನು ಸಹ ಕೊಟ್ಟು ಮದುವೆಯನ್ನು ಮಾಡಿ ಕೊಟ್ಟಿರುತ್ತಾರೆ.

3. ಮದುವೆಯ ನಂತರ ಎದುರುದಾರರು ಅರ್ಜಿದಾರಳನ್ನು ಮಾರಗೌಡನ ಹಳ್ಳಿಯಲ್ಲಿರುವ ತಮ್ಮ ಮನೆಗೆ ಕರೆದುಕೊಂಡು ಹೋಗಿರುತ್ತಾರೆ. ನಂತರ 5-6 ದಿನಗಳ ನಂತರ ಅರ್ಜಿದಾರರ ತಂದೆ ತಾಯಿ ಮಾರಗೌಡನಹಳ್ಳಿ ಹೋಗಿ ಮಗಳು ಮತ್ತು ಅಳಿಯನನ್ನು ಮನೆಗೆ ಕರೆದುಕೊಂಡು ಬಂದಿರುತ್ತಾರೆ. ನಂತರ ಅರ್ಜಿದಾರರು ಎದುರುದಾರರ ಮನೆಗೆ ಹೋಗಿ ತಮ್ಮ ಸಂಸಾರಿಕ ಜೀವನವನ್ನು ಪ್ರಾರಂಭಿಸಿರುತ್ತಾರೆ.

4. 15 ದಿನಗಳವರೆಗೆ ಅರ್ಜಿದಾರಳು ಎದುರುದಾರರ ಮನೆಯಲ್ಲಿ ಇದ್ದು ನಂತರ ಅರ್ಜಿದಾರಳ ಗಂಡ 1 ನೇ ಎದುರುದಾರರು ತಮಗೆ ಮದುವೆ ಇಷ್ಟ ಇರಲಿಲ್ಲಾ ಎಂದು ತನ್ನ ತಾತ ಬಸವಯ್ಯನ ಒತ್ತಾಯದಿಂದ ಮದುವೆಯನ್ನು ಮಾಡಿಕೊಂಡಿದ್ದು ತನಗೆ ಮದುವೆ ಇಷ್ಟಇಲ್ಲ ಎಂದು ಹೇಳಿ ಅರ್ಜಿದಾರಳಿಗೆ ತೊಂದರೆ ಕೊಟ್ಟಿರುತ್ತಾರೆ. ಸದರಿ ವಿಚಾರವನ್ನು ಅರ್ಜಿದಾರಳು ತನ್ನ ಸಹೋದರರಿಗೆ ತಿಳಿಸಿರುತ್ತಾರೆ.

5. ನಂತರ ಅರ್ಜಿದಾರಳ ಮನೆಯವರು ಮಾರಗೌಡನ ಹಳ್ಳಿಗೆ ಹೋಗಿ ನ್ಯಾಯ ಪಂಚಾಯಿತಿಯನ್ನು ಮಾಡಿ ಬಂದಿರುತ್ತಾರೆ. ಪಂಚಾಯಿತಿಯನ್ನು ಮಾಡಿದರು ಸಹ ಎದುರುದಾರರು ಅದೇ ರೀತಿ ನಡೆದುಕೊಂಡಿದ್ದು ಯಾವುದೇ ಸ್ವಂದನೆಯನ್ನುಮಾಡದ ಕಾರಣ ಅರ್ಜಿದಾರರು ಪೊಲೀಸ್ ಠಾಣೆಗೆ ಹೋಗಿ ದೂರನ್ನು ಕೊಟ್ಟಿರುತ್ತಾರೆ. ಸದರಿ ವಿಚಾರವನ್ನು ನನಗೆ ಅರ್ಜಿದಾರರ ಸಹೋದರರು ತಿಳಿಸಿರುತ್ತಾರೆ.

6. ಮದುವೆಯ ಮಾತುಕತೆಯ ಸಂದರ್ಭದಲ್ಲಿ ಎದುರುದಾರರ ಕಡೆಯಿಂದ ಬಸವಯ್ಯ ರವರು ಇದ್ದರು ಎಂದರೆ ಸರಿ. ನಾನು ಸಹ ಪೊಲೀಸ್ ಠಾಣೇ ಹೋಗಿ ನನ್ನ ಹೇಳಿಕೆಯನ್ನು ನೀಡಿರುತ್ತೇನೆ. ಪ್ರಸ್ತುತ ನೀಲಾ ರವರು ಅವರ 4 ಜನ ಸಹೋದರರ ಮನೆಯಲ್ಲಿ ಸ್ವಲ್ಪ ದಿನಗಳ ಕಾಲ ಜೀವನವನ್ನು ಸಾಗಿಸುತ್ತಿದ್ದಾರೆ. 1ನೇ ಎದುರುದಾರರು ಪ್ರಸ್ತುತ ಬೇರೆ ಮದುವೆಯನ್ನು ಮಾಡಿಕೊಂಡಿದ್ದಾರೆ ಎಂದು ನನಗೆ ಗ್ರಾಮಸ್ಥರು ತಿಳಿಸಿರುತ್ತಾರೆ.

ಈ ಹಂತದಲ್ಲಿ ಎದುರುದಾರರು  ಪರ ವಕೀಲರು ಗೈರು ಹಾಜರಿದ್ದ ಕಾರಣ ಪಾಟೀ ಸವಾಲಿಗೆ  ಕಾಲಾವಕಾಶ ನೀಡಲಾಯಿತು.

**(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ ಹೇ ಕೇ ಸ ಇದೆ ಎಂ

(ಚಂದನ ಎಸ್ )

ಹೆಚ್ಚುವರಿ  ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ